Reg No B G 155

6 — 4 —72

55 th Year of Publication ★ 'Satyavadi' Daily, Mysore 4

In the Sta e - The First
Golden Jubilee
Celebrated Paper
★
News, Views, Dharmic
Moral Ethical Matters



ರಾಷ್ಟ್ರಬಲ್ಲಿ ಪ್ರಭಹು
ಸ್ವರ್ಣ ಜಯಂತಿ
ಮಹೋತ್ಸವವನ್ನು
ಸಂಭ್ರಮದಿಂದ
ಆಚರಿಸಿದ
ಏಕೈಕ
ಪತ್ರಿಕೆ

ಸ್ಥಾಪಕರು ಅರಮನೆ ಸಿರಸ್ತೆದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ ಎಸ್. ಕೃಷ್ಣರಾವ್ [2 ಪೈಸೆ

ತ್ರಿಕರಣ ಮಂತ್ರಿಗಳಿಂದ ಭೂಮಿ ಉದಾರದಾನ

ಮುಖ್ಯಮಂತ್ರಿಗಳು

ಮೈಸೂರಿಗೆ ಬೆಂಗಳೂರಿನಿಂದ ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರು ಇಂದು ಬೆಳಿಗ್ಗೆ, ಮುಖ್ಯ ಜಾಗೃತ ಆಯೋಗದ ಅಧಿಕಾರಿಗಳ ಭೇಟಿಯ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮೈಸೂರಿನ ಪತ್ರಿಕಾವಿತರ್ಕರ ಸಂಘದ ಸದಸ್ಯರನ್ನು ಭೇಟಿ ಮಾಡಿ. ಕೇಂದ್ರ ರೀಜ್ಞೆ ಸಂಶೋಧನಾ ಮತ್ತು ತರಬೇತಿ ಸಂಸ್ಥೆಗೆ ಭೇಟಿಕೊಡುವರಲ್ಲದೆ, ಪೌರಸನ್ಮಾನವನ್ನೂ ಸ್ವೀಕರಿಸುವರು. ನಾಳೆ ಬೆಂಗಳೂರಿಗೆ ಹಿಂತೆರುವರು.

ವಿಶ್ವ ಆರೋಗ್ಯ ದಿನಾಚರಣೆ

ವಿಶ್ವ ಆರೋಗ್ಯ ದಿನಾಚರಣೆಯ ಅಂಗವಾಗಿ ವಿಜಾಪುರದಲ್ಲಿ ತಾ॥ 7 ರಂದು ವಸ್ತು ಪ್ರದರ್ಶನ, ಸೆರವಣಿಗೆ, ಸಾರ್ವಜನಿಕ ಸಭೆ ಹಾಗೂ ಚಲಚ್ಚಿತ್ರ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ

ಮುಖ್ಯಮಂತ್ರಿಗಳಿಗೆ ಅದ್ದೂರಿ ಸ್ವಾಗತ

ಮೈಸೂರು— ಶ್ರೀ ದೇವರಾಜೆಅರಸ್ ರವರು ಮುಖ್ಯ ಮಂತ್ರಿಗಳಾದ ನಂತರ ಮೈಸೂರಿಗೆ ಪ್ರಥಮವಾಗಿ ಭೇಟಿಕೊಡಲು ಒಂದಾಗಿ. ಟೋಲ್‌ಗೇಟ್ ಹತ್ತಿರ ಅವರಿಗೆ ವೈಭವ ಸ್ವಾಗತನೀಡಲಾಯಿತು; ಮುಖ್ಯಮಂತ್ರಿಗಳಿಗೆ ಪುರಸಭಾಧ್ಯಕ್ಷ ಶ್ರೀ ಸೋಮಸುಂದರಂರವರು ಪುಷ್ಪಹಾರ ಅರ್ಪಿಸಿದರು — ಪುರಪಿತೃಗಳೂ ಅಧಿಕಾರಿಗಳೂ, ಗಣ್ಯರೂ ಅನೇಕರು ಬಂದಿದ್ದರು.

★

ಮಾತ್ರೆ ಉಪಯೋಗ ತಗ್ಗಿದೆ

ನವದೆಹಲಿ— ಸಂತತಿ ಪ್ರತಿಬಂಧಕ ಮಾತ್ರೆಯ ಉಪಯೋಗ ಬಹಳ ಹೆಚ್ಚಾಗಿ ತಗ್ಗಿದೆ ಎಂದು ಲೋಕಸಭೆಯಲ್ಲಿ ತಿಳಿಸಲಾಯಿತು

ವಾಕ್ಕೊಟ್ಟಿಮಿ ದುರಂತ

ನವದೆಹಲಿ— ಗೋರಖಪುರದಲ್ಲಿ ಫೆಬ್ರವರಿಯಲ್ಲಿ ನಡೆದ ಸಾಮೂಹಿಕ ಸಂತತಿ ಪ್ರತಿಬಂಧಕ ಆಪರೇಷನ್‌ನಲ್ಲಿ 5 ಮಂದಿ ಸತ್ತ ಬಗ್ಗೆ ಲೋಕಸಭೆಯಲ್ಲಿ ಸದಸ್ಯರು ಕಳವಳ ವ್ಯಕ್ತಪಡಿಸಿದರು — ಇನ್ನು ಹೀಗಾಗಲು ಅವಕಾಶ ಕೊಡುವುದಿಲ್ಲವೆಂದು ಆರೋಗ್ಯ ಮತ್ತು ಕುಟುಂಬ ಯೋಜನಾ ಮಂತ್ರಿಯವರು ಭರವಸೆಯಿತ್ತರು.

ಸಿಟಿ ಮುನಿಸಿಪಾಲಿಟಿ, ಮೈಸೂರು
ತಾರೀಖು : 28-3-1972
ನಂ. ಸಿ.ಪಿ.ಆರ್ 178/ 71-72
ಆಬ್ಸ್ಟ್ರಾಕ್ಟ್ ಟೆಂಡರ್

ನೋಟಿಫಿಕೇಷನ್

ಈ ಮೂಲಕ ತಿಳಿಯಪಡಿಸುವುದೇನೆಂದರೆ— 1972-73 ನೇ ಸಾಲಿಗೆ (ಅಂದರೆ ತಾ: 1-4-1972 ರಿಂದ 31-3-1973 ರ ಆಖೈರಿನವರೆವಿಗೆ) ಮೈಸೂರು ಪುರಸಭೆ ಮರಾಮತ್ ಇಲಾಖೆಯ ಉಪಯೋಗಕ್ಕಾಗಿ ಬೇಕಾಗುವ ಸುಮಾರು 30 ಟನ್ ಕಾಡುಮರದ ಪೀಲಿದ ಪೌಪಿಯನ್ನು ಸರಬರಾಜು ಮಾಡಲು ಪೀಲಾದ ಟೆಂಡರುಗಳನ್ನು ತಾ: 12-4-1972 ನೇ ಬುಧವಾರ ದಿವಸ ಮಧ್ಯಾಹ್ನ 4 ಘಂಟೆಯವರೆಗೆ ಮುನಿಸಿಪಲ್ ಕಮೀಷನರ್‌ರವರಿಂದ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ಐನೂರು ರೂಪಾಯಿ ಟೆಂಡರ್ ಡಿಪಾಜಿಟ್ಟನ್ನು ಮುನಿಸಿಪಲ್ ಖಜಾನೆಗೆ 3 ಘಂಟೆಯೊಳಗೆ ಪಾವತಿಮಾಡಿ ಪರ್ಚೆಸ್ಸೈಡ್ ಮಾಡಿದ ಚಲನ್ ಸಮೇತ ತಮ್ಮ ಟೆಂಡರುಗಳನ್ನು ಕೊಡಬಹುದು ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಪಡೆದುಕೊಳ್ಳಬಹುದು

(ಸಹಿ) ಪಿ. ಗೋಪಾಲರೆಡ್ಡಿ.
ಮುನಿಸಿಪಲ್ ಕಮೀಷನರ್.

ರಾಜರಲ್ಲಿಯ ಆಯುಧಗಳು

ನವದೆಹಲಿ— ಮಾಜಿ ರಾಜರುಗಳು ಹೊಂದಿರುವ ಆಯುಧ ಪಟ್ಟಿಗಳನ್ನು ಪಡೆದು, ಅವರು ಅವುಗಳನ್ನು ಯಾವ ರೀತಿಯಲ್ಲೂ ಏಲೇ ಮಾಡದಂತೆ ನೋಡಿಕೊಳ್ಳುವಂತೆ ರಾಜ್ಯ ಸರಕಾರಗಳಿಗೆ ಸೂಚಿಸಲಾಗಿದೆಯೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ಪುರಸಭೆ

ಮೈಸೂರು— ಪುರಸಭೆಯ ಮುಂದುವರಿದ ಅಧಿವೇಶನವು ತಾ॥ 10 ಸೋಮವಾರ ಮಧ್ಯಾಹ್ನ 4 ಗಂಟೆಗೆ ನಡೆಯುತ್ತೆ.

★

ಮೈಸೂರಿನಲ್ಲಿ ಶಾಸನಸಭಾಧಿವೇಶನ

ಮೈಸೂರು— ಇಲ್ಲಿ ಶಾಸನ ಸಭೆಯ ಒಂದು ಅಧಿವೇಶನ ನಡೆಸುವ ವಿಷಯ ಪರ್ಯಾಲೋಚಿಸಲಾಗುವುದೆಂದು ಶಾಸನಸಭಾ ಸ್ವೀಕರ್ ಶ್ರೀಮತಿ ನಾಗರತ್ನಮ್ಮನವರು ಹೇಳಿದರು.

●

ಮಂತ್ರಿವರ್ಯರ ಸ್ತುತ್ಯ ಕಾರ್ಯ

ಶಿವಮೊಗ್ಗಾ— ವಿದ್ಯಾ ಮಂತ್ರಿ ಶ್ರೀ ಬದ್ರಿ ನಾರಾಯಣರವರು, ತಮಗೆ ಐಗಳ ಪ್ರಾಜೆಕ್ಟ್ ನಿರ್ಮಾಣ ನಂತರ ತಮ್ಮ ಗದ್ದೆ ಮುಳುಗಡೆಯಾದುದರ ಪರಿಹಾರವಾಗಿ ಹಿಂದಿನ ಮಂತ್ರಿ ಮಂಡಲ ಕೊಟ್ಟಿದ್ದ 27 ಎಕ್ರೆ ಗದ್ದೆಯನ್ನು ಭೂಮಿ ಇಲ್ಲದವರಿಗೆ ಹಂಚಲು ಉದಾರ ದಾನ ಮಾಡಿರುವುದು ಪ್ರಶಂಸನೀಯವು.

●

ರಾಜ್ಯಕ್ಕೆ ಜೋಳ

ಬೆಂಗಳೂರು— ರಾಜ್ಯದ ಅವಶ್ಯಕತೆಗಾಗಿ ಕೂಡಲೇ 3000 ಟನ್ ಜೋಳವನ್ನು ಕಳುಹಿಸುವಂತೆ ರಾಜ್ಯ ಸರಕಾರ ಕೇಂದ್ರವನ್ನು ವಿನಂತಿಸಿದೆ.

ಒಲಂಪಿಯಾ ಚಿತ್ರಮಂದಿರ ಮೈಸೂರು
ದಿನ 2-45, 6-15 ಮತ್ತು 9-45ಕ್ಕೆ

ಮತ್ತು ಶಾಲಿಮಾರ್ ಚಿತ್ರಮಂದಿರ
ದಿನ 3, 6-30 ಸ್ಟುಕ್ತು 10 ಕ್ಕೆ ಮೈಸೂರು

(ರಾಜ್ಯದ ಪ್ರಪ್ರಥಮ ಸಂಪೂರ್ಣ ಹೆನಾ ನಿಯಂತ್ರಣ ಮಿನಿ ಚಿತ್ರಮಂದಿರ
ಹೊಟೇಲ್ ಸುಜಾತಾ ಹತ್ತಿರ)

ತಾ 7-4-72 ನೇ ಶುಕ್ರವಾರದಿಂದ ಅಪೂರ್ವ ಪ್ರಾರಂಭ
ದಿನ 3 ಪ್ರದರ್ಶನಗಳು

ಫಿಲ್ಮ್ ನಗರ್‌ರವರ ವರ್ಷದ ಅತ್ಯುತ್ತಮ ಸಂಗೀತಭರಿತ, ಸಾಮಾಜಿಕ ಚಿತ್ರರತ್ನ

ಸೀಮಾ

ಪಾತ್ರ : ಸಿವಿ. ರಾಕೇಶ್ ರೋಷನ್. ಕವಿತಾ ಬೇಡಿ, ಭಾರತಿ, ಪದ್ಮ ಖನ್ನ ಇನ್ನೂ ಅನೇಕ ಪ್ರಮುಖರು

ಸಂಗೀತ : ಶಂಕರ್ ಜೈಕಿಶನ್
ನಿರ್ದೇಶಕ : ಸುರೇಂದ್ರ ಮೋಹನ್

ಅಂತರ್ರಾಷ್ಟ್ರೀಯ ವೃತ್ತಪತ್ರಿಕೆಗಳ ಪ್ರದರ್ಶನ

ಮ್ಯೂನಿಚ್ [ಡಾಡ್]— ಸೆಡಾಲ್ ಜರ್ಮನಿಯ ಅಸ್ಸನಲ್ಲಿನ ಅಂತರ್ರಾಷ್ಟ್ರೀಯ ವೃತ್ತಪತ್ರಿಕೆ ಪ್ರದರ್ಶನದಲ್ಲಿ 10:000 ಪತ್ರಿಕೆಗಳನ್ನು ಪ್ರಪಂಚದ ಎಲ್ಲಾ ರಾಷ್ಟ್ರಗಳಿಂದಲೂ ಶೇಖರಿಸಲಾಗಿದೆ : ಅವುಗಳಲ್ಲಿ ವಿವಿಧ ಪ್ರತ್ಯೇಕ ಸಂಪುಟಗಳ ಶೇಖರಣೆಗಳೂ ಇವೆ ; ಅವುಗಳಲ್ಲಿ 1859 ರಲ್ಲಿ ನ್ಯೂಯಾರ್ಕ್‌ನಲ್ಲಿ ಪ್ರಕಟವಾದ ' ಕಾನಪ್ಟಲೇಷನ್ ' ಪತ್ರಿಕೆಯ ಪ್ರತಿಯು ಅತ್ಯಂತ ದೊಡ್ಡದು ; ಇದರ ಎತ್ತರ 12 ಇಂಚ್ಟರಂಗಳು : ಹಾಗೆಯೇ 1829 ರಲ್ಲಿ ಪ್ರಕಟಣೆಯಾದ " ಡಯಮಿಯೊರೊಮಾ " ಪತ್ರಿಕೆಯು ಕೇವಲ 1/2 7 ಸೆಂ. ಮೀ ಎತ್ತರವಿದೆ ; ಪ್ರಪಂಚದ ಅತಿ ದೊಡ್ಡ ಮತ್ತು ಅತಿ ಸಣ್ಣ ಪತ್ರಿಕೆಗಳೂ ಇಲ್ಲಿ ಶೇಖರಣೆ ಮಾಡಲ್ಪಟ್ಟಿವೆ, ಅತ್ಯಂತ ಆಶ್ಚರ್ಯಕರ ಸಂಗ್ರಹಗಳಲ್ಲಿ ಒಂದಾಗಿವೆ. [ಯು ಪಿ ಎಸ್]

★

ದಿವ್ಯವಾಣಿ

ತಾಳ್ಮೆಗೆ ಸಮಾನವಾದ ತಪಸ್ಸಿಲ್ಲ, ಸಂತೋಷಕ್ಕೆ ಮಿಗಿಲಾದ ಸುಖವಿಲ್ಲ, ಲೋಭದಷ್ಟು ದೊಡ್ಡ ರೋಗವಿಲ್ಲ, ದಯೆಗಿಂತ ದೊಡ್ಡ ಧರ್ಮವಿಲ್ಲ — ಸುಭಾಷಿತ.

ವುಡ್‌ಲಾಂಡ್ 7-4-72 ರಿಂದ ಅತೋಷ 2ನೇ ವಾರ

ಪ್ರೀತಿ ಚಿತ್ರ ಇಂಟರ್ ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ್ ಕುಮಾರ್, ನವೀನ್ ನಿಶ್ಚಲ್, ಯೋಗಿತಾ ಬಾಲಿ, ಶತ್ರುಘ್ನ ಸಿನ್ಹ, ಪ್ರಾಣ್, ರೆಹಾನ್, ನಿರೂಪರಾಯ್ ಮುಂತಾದವರು

ಸಂಗೀತ – ರವಿ (ದಿನಕ್ಕೆ 3 ಪ್ರದರ್ಶನಗಳು) ನಿರ್ದೇಶನ – ವೀರೇಂದ್ರ ಸಿನ್ಹ

ಬಾಲ್ಕನಿ ತಲಗತಿಗಳಿಗೆ ಬೆಳಗ್ಗೆ 11 ರಿಂದ 12 ರ ವರೆಗೆ ಮುಂಗಡ ಟಿಕೆಟ್ ಉಂಟು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕ್ಕೆ " ಕಪ್ಪು ಬಿಳುಪು "

ಅಪೇರಾ 7 4 72 ರಿಂದ

ಅತ್ಯನೋಷ ತೆಲುಗು ಚಿತ್ರ

ಬಂದಿಪೋಟಿ ದೊಂಗಲು

ಪಾತ್ರ : ನಾಗೇಶ್ವರರಾವ್, ಎಸ್. ವಿ. ರಂಗರಾವ್, ಜಮುನ, ಕಾಂಚನ, ಗುಮ್ಮಡಿ

ನಿರ್ದೇಶನ – ಪಿ. ಪ್ರಕಾಶರಾವ್ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

Edited Printedand Published by Dharmapracharanirata M S Krishna Rao (Proprietor) at the Satyavadi Press Chamarajapuram Mysore 4

ದಿವ್ಯವಾಣಿ

ಜನತೆಯ ಹಿತಕ್ಕಾಗಿ ಅನುಭವದ ಆಧಾರದಿಂದ ಮಾನವಬುದ್ಧಿವಂತಿಕೆ ನಿರ್ಮಿಸಿರುವುದೇ ಕಾನೂನು. ಡಾ ॥ ಜಾನ್ಸನ್

ಶಂಕರಪ್ಪ ಸ್ಮಾರಕ ನಿರ್ಮಿಸಿ

ಎ ಲ್ಲ

ಮೈಸೂರು ನಗರ ಆಡಳಿತ ಕಾಂಗ್ರೆಸ್ ಸಮಿತಿಯ ಗಮನಕ್ಕೆ

ಮೈಸೂರು ರಾಜ್ಯ ಆಡಳಿತ ಕಾಂಗ್ರೆಸ್ ಗಮನಕ್ಕೆ

ಮೈಸೂರು ಮಂತ್ರಿಮಂಡಲದ ಗಮನಕ್ಕೆ

ಒಳಾಡಳಿತ ಶಾಖೆಯನ್ನು ಹೊಂದಿರುವ ಮುಖ್ಯ ಮಂತ್ರಿಯವರಾದ ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸ್ ಅವರ ಸ॥ ಕ್ಕೆ

1942 ರ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಕಾರಾಗೃಹದಲ್ಲಿ ಹುತಾತ್ಮರಾದ ಶಂಕರಪ್ಪನಿಗೆ ಸೂಕ್ತ ಸ್ಮಾರಕ ರಚಿಸಿ

ಶಂಕರಪ್ಪ ಮೆಡಿಕಲ್ ವಿದ್ಯಾರ್ಥಿ. ಅವರೊಡನೆ ಕಾರಾಗೃಹದಲ್ಲಿ ಇದ್ದ, ಈಗ ಪ್ರಧಾನರ ಬಳಿ ಸೇವೆ ಸಲ್ಲಿಸುತ್ತಿರುವ ಶ್ರೀ ಹೆಚ್. ವೈ. ಶಾರದಾ ಪ್ರಸಾದ್ ಮತ್ತು ಚಿತ್ರೋದ್ಯಮಿ ಶ್ರೀ ಎಂ. ವಿ. ಕೃಷ್ಣಸ್ವಾಮಿ ಶಂಕರಪ್ಪನ ಬಗೆಗ ವಿಚಾರ ತಿಳಿಸಲು ಸಮರ್ಥರು

★

Protect the Cow

Quality Printing Neat Binding

Lakshminarasimha Press

Sivarampet, Mysore

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ ' ಕಲ್ಪನೆ ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

ಅನೆ – ಹುಡುಗ

ಹೊಸ ರೀತಿಯ ತಿಳುವಳಿಕೆ ಕೊಡುವ ಆಕರ್ಷಣೀಯ ಚಿತ್ರ

Contribute Liberally

to the National Defence Fund

ಕುಟುಂಬ ಯೋಜನೆ

ದೇಶ ಹಿತಕಾಗಿ